**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ.584 /2017</u>**

**ದಿನಾಂಕಃ17-07-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**

ಪಿ.ಡಬ್ಲ್ಯುಃ3 ಸಿ.ಡಬ್ಲುಃ 2

ಸಾಕ್ಷಿಯ ಹೆಸರು ಃ ಮಂಜುನಾಥ
ತಂದೆಯ ಹೆಸರು ಃ ಶರಣಪ್ಪ
ವಯಸ್ಸು ಃ 52 ವರ್ಷ
ಉದ್ಯೋಗ ಃ ಶಿಕ್ಷಕರು
ವಾಸ ಃ ಕಡೂರು

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ಅವರಿಂದಃ-</u>**

ಚಾಸಾ.1 ನನ್ನ ಅತ್ತಿಗೆ. ಚಾಸಾ.4 ನನ್ನ ಷಡಕ. ಚಾಸಾ.5 ನನ್ನ ಹೆಂಡತಿ. ಸಾಕ್ಷಿದಾರರಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರ ಮೇಲೆ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆ ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-2 ಮಹಜರಿಗೆ ದಿಃ30-9-2015 ರಂದು ಚಾಸಾ,1 ರವರ ಮನೆಯ ಹತ್ತಿರ ಕಳ್ಳತನದ ಸಂಬಂಧ ಅಂದರೆ ಚಾಸಾ.1 ರವರ ಕೊರಳ ಚೈನ್ ಕಿತ್ತುಕೊಂಡು ಹೋದ ವಿಚಾರವಾಗಿ ಚಾಸಾ.1 ರವರ ಮನೆಯ ಗೇಟಿನ ಒಳಭಾಗದಲ್ಲಿ ಸಂಜೆ 6-00 ರಿಂದ 6-30 ರ ಸಂದರ್ಭದಲ್ಲಿ ಪೋಲೀಸರು ನಿಪಿ-2 ರಂತೆ ಮಹಜರನ್ನು ಮಾಡಿದ್ದಾರೆ. ಚಾಸಾ.1 ಘಟನಾ ಸ್ಥಳವನ್ನು ಪೋಲೀಸರಿಗೆ ತೋರಿಸಿರುತ್ತಾರೆ. ನಿಪಿ-2 ರಲ್ಲಿ ಬರೆದಿರುವ ವಿಚಾರವನ್ನು ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ.

**<u>ಪಾಟೀ ಸವಾಲುಃ ೨ ನೇ ಆರೋಪಿ ಪರ ಶ್ರೀ ಎಸ್.ಎನ್. ವಕೀಲರಿಂದ</u>**

ನಾನು ಸೆಪ್ಟೆಂಬರ್-2015 ರಲ್ಲಿ ಹಿರೇನಲ್ಲೂರು ಗ್ರಾಮದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಶಾಲೆ ಬಿಡುವ ಸಮಯ ಸಂಜೆ 4-30 ಗಂಟೆ ಆಗುತ್ತದೆ. ನಿಪಿ-2 ಕ್ಕೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದಿರುವ ವಿಚಾರ ತಿಳಿಯದೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ಸಹಿಯನ್ನು ಹೊರತುಪಡಿಸಿ ಪೋಲೀಸರು ನನ್ನ ಪ್ರತ್ಯೇಕ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಪೋಲೀಸರಿಗೆ ಘಟನಾ ಸ್ಥಳವನ್ನು ಚಾಸಾ.4 ತೋರಿಸಿದ್ದಾರೆ ಎಂದರೆ ಸಾಕ್ಷಿ ಚಾಸಾ.1 ತೋರಿಸಿರುತ್ತಾರೆ ಎಂದು

ನುಡಿಯುತ್ತಾರೆ. ಚಾಸಾ.1 ನನ್ನ ಸಂಬಂಧಿಯಾದ ಕಾರಣ ಅವರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ಮಹಜರಿನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

**೧ನೇ ಆರೋಪಿ ಪರ ಶ್ರೀ ಸಿಎಲ್.ಡಿ ವಕೀಲರು ೨ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುವುದಾಗಿ ನುಡಿಯುತ್ತಾರೆ.**

**ಮರು ವಿಚಾರಣೆಃ ಇರುವುದಿಲ್ಲ.**

**(**ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸ ಇ ಎ ಒ

( ಸಿ.ಎನ್.ಚಂದನ್ )
ಪ್ರಃಪ್ರಃದಃನ್ಯಾಃದಂ.,ರವರು,
ಕಡೂರು.